<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

ಸಿ.ಸಿ. ಸಂಃ **2141/2022**

| | | |
|---|---|---|
| ಸಾಕ್ಷಿಯ ಹೆಸರುಃ | ನಾಗೇಂದ್ರ | ಫ್ರಾಸಾಃಃ 2 |
| ತಂದೆಯ ಹೆಸರುಃ | ಲೇಟ್ ಗೋವಿಂದ | ಚಾಸಾಃಃ 2 |
| ವಯಸ್ಸುಃ | 30 ವರ್ಷ | ಪ್ರಮಾಣೀಕರಿಸಿದ ದಿಃ 29.07.2026 |
| ಉದ್ಯೋಗಃ | ಗಾರೆ ಕೆಲಸ | |
| ವಾಸ ಸ್ಥಳಃ | ದೇವೇಗೌಡನ ಕೊಪ್ಪಲು, ಪಿರಿಯಾಪಟ್ಟಣ | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ಚಾಸಾ-1 ರವರ ಪರಿಚಯವಿರುತ್ತದೆ. ಚಾಸಾ-3 ರಿಂದ 5 ರವರು ನನ್ನ ಸ್ನೇಹಿತರಿರುತ್ತಾರೆ. ಈಗ್ಗೆ ಸುಮಾರು 3 ವರ್ಷಗಳ ಹಿಂದೆ ನಾನು ಚಾಸಾ-1 ರವರ ಹಾರ್ಡ್ ವೇರ್ ಅಂಗಡಿಗೆ ಕಬ್ಬಿಣದ ಬಾಂಡ್ಲಿ ಖರೀದಿಗೆ ಸುಮಾರು ಸಂಜೆ 4 ಗಂಟೆಗೆ ಹೋಗಿದ್ದಾಗ ಆ ಸಮಯದಲ್ಲಿ ಸದರಿ ಅಂಗಡಿ ಹಿಂಭಾಗ ಜಗಳ ನಡೆಯುತ್ತಿದ್ದು ಆರೋಪಿತಳು ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶಿಸಿ ಸದರಿ ಜಮೀನು ನಮಗೆ ಸೇರಿದ್ದು ಈ ಜಮೀನಿನಲ್ಲಿ ಯಾಕೆ ಬೋರ್ ವೆಲ್ ರಿಪೇರಿ ಮಾಡುತ್ತೀಯಾ ಎಂದು ಚಾಸಾ-1 ರವರನ್ನು ಪ್ರಶ್ನಿಸಿ ಬೋಳಿ ಮಗನೆ ಸೂಳೆಮಗನೆ ಎಂದು ಅವಾಚ್ಯಶಬ್ದಗಳಿಂದ ನಿಂದಿಸಿ ನಮ್ಮ ತಾತ ಅಜ್ಜಿಯ ಜಮೀನಿನಲ್ಲಿ ಬೋರ್ ವೆಲ್ ಕೊರೆಯುತ್ತೀಯಾ ಎಂದು ಹೇಳಿ ಬಡಿಗೆಯಿಂದ ಚಾಸಾ-1 ರವರ ಕೈ ಮತ್ತು ಭುಜಗಳಿಗೆ ಹೊಡೆದಿರುತ್ತಾರೆ ಮತ್ತು ನಿನ್ನನ್ನು ಮುಗಿಸುತ್ತೇನೆ ಎಂದು ಕೊಲೆ ಬೆದರಿಕೆಯನ್ನು ಹಾಕಿರುತ್ತಾಳೆ. ಆಗ ನಾನು ಮತ್ತು ಚಾಸಾ-3 ರಿಂನದ 5 ಜಗಳವನ್ನು ಬಿಡಿಸಿರುತ್ತೇವೆ. ಒಂದು ವೇಳೆ ನೀನು ಪುನಃ ಬೋರ್ ವೆಲ್ ರಿಪೇರಿ ಮಾಡಿದರೆ ನಾನು ನನ್ನ ಬಟ್ಟೆಯನ್ನು ನಾನೇ ಹರಿದುಕೊಂಡು ನಿನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ಮಾನಭಂಗದ ದೂರನ್ನು ನೀಡುತ್ತೇನೆ ಎಂದು ಚಾಸಾ-1 ರವರಿಗೆ ಹೇಳಿರುತ್ತಾರೆ. ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತಳನ್ನು ನೋಡಿದರೆ

ಗುರುತಿಸುತ್ತೇನೆ. ಆರೋಪಿತಳು ನ್ಯಾಯಾಲದ ಮುಂದೆ ಗೈರುಹಾಜರಿದ್ದು ಆಕೆಯ ಗುರುತು ಪತ್ತೆಗೆ ತಕರಾರು ಇಲ್ಲ ಎಂದು ಆರೋಪಿತಳ ಪರ ವಕೀಲರು ತಿಳಿಸಿರುತ್ತಾರೆ.

(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದಃ

1. ದಿಃ 03.02.2022 ರಂದು ಬೆಳಿಗ್ಗೆ 11 ಗಂಟೆಗೆ ಗಲಾಟೆಯಾಗಿರುತ್ತದೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ